1 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ,  ನ್ಯಾಯಾಧೀಶರವರ

ನ್ಯಾಯಾಲಯ ,  ಚನ್ನಗಿರಿ .

ಸಿಸಿ ನಂ.**36/2022**

ಹೆಸರುಃ  ಸುರೇಶ                                                                 ಚಾಸಾಃ 3

ತಂದೆಃ  ರಂಗಪ್ಪ                                                                  ಪ್ರಾಸಾ: 4

ವಯಸ್ಸುಃ  42

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ   ಗೊಪ್ಪೇನಹಳ್ಳಿ    ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 05-09-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಈಗ ಸಾಕ್ಷಿಗೆ ಮಹಜರ್ ನ್ನು  ತೋರಿಸುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ.    ಸದರಿ ಮಹಜರ್ ನ್ನು  ಈಗಾಗಲೇ  ನಿಶಾನೆ ಪಿ 3 ಎಂದು ಗುರುತಿಸಲಾಗಿರುತ್ತದೆ .  ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ  3 ಬಿ  ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ದಿಃ  22-09-2021 ರಂದು ಗೊಪ್ಪೇನಹಳ್ಳಿ ಗ್ರಾಮದಲ್ಲಿ ಇರುವ  ಜಯಪ್ಪನವರ ಮನೆಯ ಹತ್ತಿರ  ಕಳ್ಳತನವಾದ ವಿಚಾರದಲ್ಲಿ ಸಹಿಯನ್ನು ಮಾಡಿರುತ್ತೇನೆ. ಸದರಿ ಮಹಜರ್ ಸ್ಥಳವನ್ನು ಚಾಸಾ 1 ರವರು ತೋರಿಸಿರುತ್ತಾರೆ .  ಪೊಲೀಸರು ಸಂಜೆ 5.00 ರಿಂದ 6.00 ಗಂಟೆಯವರೆಗೆ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿರುತ್ತಾರೆ .

ಸದರಿ ಮಹಜರ್ ಸಮಯದಲ್ಲಿ  ಚಾಸಾ  1 ಮತ್ತು 2 ರವರು ನನ್ನ ಜೊತೆ ಸ್ಥಳದಲ್ಲಿ ಇದ್ದು ಸಹಿಯನ್ನು ಮಾಡಿರುತ್ತಾರೆ .  ಮಹಜರ್ ನಲ್ಲಿ ಬರೆದ ವಿಚಾರ ನನಗೆ ಗೊತ್ತಿದೆ .

ಆರೋಪಿ ಪರ ವಕೀಲರಾದ ಎಸ್.ಎಸ್. ವಕೀಲರಿಂದಃ-

ನಾನು ಬಿ.ಎ( ಅನುತ್ತೀರ್ಣ )ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಮಹಜರ್ ಬರೆದವರ ಹೆಸರು ನನಗೆ ಗೊತ್ತಿಲ್ಲ . ಸದರಿ ಮಹಜರ್ ಗೆ ಪೊಲೀಸ್ ಠಾಣೆಯಲ್ಲಿ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ . ಮಹಜರ್ ಮಾಡುವ ಕಾಲಕ್ಕೆ ಎಷ್ಟು ಜನ ಉಪಸ್ಥಿತರಿದ್ದರು ಎಂದರೆ ಸಾಕ್ಷಿಯು ಹೊರಗಡೆ 20 ರಿಂದ 30 ಜನ ಇದ್ದರು ಎಂದು ನುಡಿಯುತ್ತಾರೆ .ಚಾಸಾ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಸದರಿ ಮಹಜರ್ ಮಾಡಿದ ಸ್ಥಳದ ಚಕ್ಕುಬಂಧಿ ನನಗೆ ಗೊತ್ತಿದೆ . ಸ್ಥಳ ಪಂಚನಾಮೆಯಲ್ಲಿ ಯಾವ ಬಡಾವಣೆಯಲ್ಲಿ ಎಂದು ನಮೂದು ಮಾಡಿಲ್ಲ ಎಂದರೆ ಸರಿ . ನಾನು ಪಂಚನಾಮೆಯನ್ನು ಮಾಡುವ ಕಾಲಕ್ಕೆ ಸ್ಥಳದಲ್ಲಿ ಇರಲಿಲ್ಲ ಪೊಲೀಸ್ ಠಾಣೆಯಲ್ಲಿ ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**01** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,

ಚನ್ನಗಿರಿ.